# ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ದೂರವಾಣಿ ಸಂ: 08482 225440
ಫ್ಯಾಕ್ಸ್ ಸಂ: 08482 225440
ಮಿಂಚಂಚೆ: eebidargescom1@gmail.com
ಅಂತರ್ಜಾಲ:

ರವರ ಕಛೇರಿ
ಕಾರ್ಯನಿರ್ವಾಹಕ ಇಂಜಿನೀಯರರು (ವಿ)
ಕಾರ್ಯ ಮತ್ತು ಪಾಲನೆ ವಿಭಾಗ
ಗುವಿಸಕಂನಿ, ಬೀದರ

ಸಂ: ಕಾಇಂ/ಸಕಾಇ(ವಿ)/ಸಲೆಅ(ತಾ)/ಸಹಾ(ಆ)/ತ-೧೦೮/2019-20/ 10

ದಿನಾಂಕ: 2019

**ದಿನಾಂಕ ೨೦.೧೧.೨೦೧೯ ರಂದು ಬೆಳಿಗ್ಗೆ ೧೧.೦೦ ಗಂಟೆಗೆ ಬೀದರ ಕಾರ್ಯ ಮತ್ತು ಪಾಲನೆ ವಿಭಾಗ ವ್ಯಾಪ್ತಿಯ ಹೆಚ್.ಟಿ ವಿದ್ಯುತ್ ಗ್ರಾಹಕರ ಸಭೆಯ ನಡಾವಳಿಗಳು**

ಉಲ್ಲೇಖ: ಕಾಇಂ/ಸಕಾಇ(ವಿ)/ಸಲೆಅ(ತಾ)/ಸಹಾ(ಆ)/ತ-೧೬೫/2019-20/೧೦೦೬೩-೬೪ ದಿ. ೧೬.೧೧.೧೯

*****

ಸಭೆಯ ಅಧ್ಯಕ್ಷತೆಯನ್ನು ಶ್ರೀ ಬಸವರಾಜ ಪಾಟೀಲ, ಕಾರ್ಯನಿರ್ವಾಹಕ ಇಂಜಿನೀಯರರು(ವಿ), ಕಾರ್ಯ ಮತ್ತು ಪಾಲನೆ ವಿಭಾಗ ಗುವಿಸಕಂನಿ ಬೀದರ ರವರು ವಹಿಸಿದ್ದು, ಸಭೆಗೆ ಆಗಮಿಸಿದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಸ್ವಾಗತ ಕೋರಲಾಯಿತು ಹಾಗೂ ಈ ಹಿಂದೆ ದಿನಾಂಕ ೧೫.೦೭.೨೦೧೯ ರಂದು ಕರೆಯಲಾಗಿದ್ದ ಹೆಚ್.ಟಿ ಗ್ರಾಹಕರ ಸಭೆಯಲ್ಲಿ ಬಂದಿರುವ ಅರ್ಜಿಗಳ ಬಗ್ಗೆ ಗುವಿಸಕಂನಿ ಅಧಿಕಾರಿಗಳು ಕೈಗೊಂಡಿರುವ ಕ್ರಮದ ಕುರಿತಂತೆ ಚರ್ಚಿಸಲಾಯಿತು. ಕಳೆದ ಸಭೆಯಲ್ಲಿ ಸುಮಾರು ೭ ಅರ್ಜಿಗಳು ಬಂದಿದ್ದು ಸದರಿ ಎಲ್ಲಾ ದೂರುಗಳನ್ನು ಸರಿಪಡಿಸಲಾಗಿರುತ್ತದೆ ಎಂದು ಸಂಬಂಧಿತ ಸ.ಕಾರ್ಯನಿರ್ವಾಹಕ ಇಂಜಿನೀಯರರು ತಿಳಿಸಿದ್ದು, ಆದರೆ ಲಿಖಿತ ರೂಪದಲ್ಲಿ ಅರ್ಜಿದಾರರಿಗೆ ಮಾಹಿತಿ ನೀಡದಿರುವುದನ್ನು ಸಭೆಯಲ್ಲಿ ಗಂಭೀರವಾಗಿ ಪರಿಗಣಿಸಿ, ಎಲ್ಲಾ ಉಪ ವಿಭಾಗಾಧಿಕಾರಿಯವರಿಗೆ ಕಡ್ಡಾಯವಾಗಿ ಲಿಖಿತ ರೂಪದಲ್ಲಿ ಸಂಬಂಧಿತ ಅರ್ಜಿದಾರರಿಗೆ ೩ ದಿವಸಗಳೊಳಗಾಗಿ ಮಾಹಿತಿ ನೀಡಲು ಸೂಚಿಸಲಾಯಿತು.

ಸಭೆಯಲ್ಲಿ ಹಾಜರಿದ್ದ ಗ್ರಾಹಕರು: ಲಗತ್ತಿಸಲಾಗಿದೆ..

೧. ಮೆ. ಕೈರಾಲ್ ಬಯೋ ಸ್ಟೈನ್ಸ್ ಆರ್ ಆರ್ ಸಂಖ್ಯೆ-ಕೆ.ಹೆಚ್.ಟಿ-೪೯ ಮತ್ತು ಮೆ. ಸ್ಟೀರಿಯೋ ಫ್ರುಟ್ಸ್ ಆರ್.ಆರ್.ಸಂಖ್ಯೆ-ಕೆ.ಹೆಚ್.ಟಿ-61:- ಕೋಳಾರ ಕೈಗಾರಿಕಾ ಪ್ರದೇಶದ ಈ ಎರಡು ಸ್ಥಾವರಗಳ ವಿದ್ಯುತ್ ಸಂಪರ್ಕವನ್ನು ವಾಯು ಮಾಲಿನ್ಯ ಮಂಡಳಿ ಇಲಾಖೆಯವರ ಆದೇಶದ ಮೇರೆಗೆ ಕಡಿತಗೊಳಿಸಿದ್ದು, ಸದರಿ ಸ್ಥಾವರಗಳಿಗೆ ಸಿಂಗಲ್ ಫೇಜ ವಿದ್ಯುತ್ ಸರಬರಾಜನ್ನು ಕಲ್ಪಿಸಲು ಸದರಿ ಕೈಗಾರಿಕೆಗಳ ಪ್ರತಿನಿಧಿಗಳು ಕೋರಿದರು.

- ಕಮಠಾಣ ಉಪವಿಭಾಗದ ಸ.ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಮಾತನಾಡುತ್ತಾ ಕೋಳಾರ ಕೈಗಾರಿಕಾ ಪ್ರದೇಶದಲ್ಲಿ ಸದರಿ ಎರಡು ಸ್ಥಾವರಗಳಿಗೆ ವಾಯು ಮಾಲಿನ್ಯ ಮಂಡಳಿ ಇಲಾಖೆಯ ಆದೇಶದ ಮೇರೆಗೆ ಸದರಿ ಸ್ಥಾವರಗಳಿಗೆ ನಿಯಮಾನುಸಾರ ಲಿಖಿತ ರೂಪದಲ್ಲಿ ಮಾಹಿತಿ ನೀಡಿ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಲಾಗಿರುವುದೆಂದು ತಿಳಿಸಿದರು. ಪುನಃ ಸಂಪರ್ಕ ಪಡೆಯಲು ವಾಯು ಮಾಲಿನ್ಯ ಇಲಾಖೆಯಿಂದ ಸದರಿ ಸ್ಥಾವರಗಳಿಗೆ ನಿರಾಕ್ಷೇಪಣಾ ಪತ್ರ ಪಡೆಯುವುದು ಕಡ್ಡಾಯವೆಂದು ತಿಳಿಸಲಾಯಿತು ಹಾಗೂ ಸದರಿ ಸ್ಥಾವರಗಳು ಹೆಚ್.ಟಿ. ಪ್ರವರ್ಗ ಬಳಕೆಗೆ ಸೇರಿದ್ದರಿಂದ ೧-ಫೇಜ್ ವಿದ್ಯುತ್ ಸರಬರಾಜು ಕಲ್ಪಿಸುವ ಅವಕಾಶವಿರುವುದಿಲ್ಲವೆಂದು ತಿಳಿಸಲಾಯಿತು.
  (ಕ್ರಮ: ಮೆ. ಕೈರಾಲ್ ಬಯೋ ಸ್ಟೈನ್ಸ್ ಆರ್ ಆರ್ ಸಂಖ್ಯೆ-ಕೆ.ಹೆಚ್.ಟಿ-೪೯ ಮತ್ತು ಮೆ. ಸ್ಟೀರಿಯೋ ಫ್ರುಟ್ಸ್ ಆರ್.ಆರ್.ಸಂಖ್ಯೆ-ಕೆ.ಹೆಚ್.ಟಿ-೬೧)

Scanned with CamScanner

೨. ಮೆ. ಶಿವ ಉದ್ಯೋಗ, ಕೋಳಾರ ಆರ್.ಆರ್.ಸಂ.ಕೆ.ಪಿ-೬೭ (...) ರವರ ಕಾರ್ಖಾನೆಯ ಪ್ರತಿನಿಧಿ ಹಾಜರಿದ್ದು ಪ್ರತಿ ತಿಂಗಳು ದಿನಾಂಕ ೧೦ರ ನಂತರವೇ ವಿದ್ಯುತ್ ಬಿಲ್ಲು ಸಲ್ಲಿಸಲಾಗುತ್ತಿದ್ದು. ವಿದ್ಯುತ್ ಬಿಲ್ಲಿನ ಮೊತ್ತವನ್ನು ನಿಗದಿತ ಸಮಯ(ಅಂದರೆ ದಿನಾಂಕ ೧೫ ಪ್ರತಿತಿಂಗಳು)ದೊಳಗೆ ಪಾವತಿಸಲು ತೊಂದರೆಯಾಗುತ್ತಿದ್ದು, ವಿದ್ಯುತ್ ಬಿಲ್ಲನ್ನು ಪ್ರತಿ ತಿಂಗಳು ದಿನಾಂಕ ೫ರ ಒಳಗೆ ನೀಡಲು ಕೋರಿದರು.

- ಬೀದರ ಉಪವಿಭಾಗದ ಸ.ಕಾರ್ಯನಿರ್ವಾಹಕ ಇಂಜನೀಯರರು(ವಿ) ಮಾತನಾಡುತ್ತಾ ತಮ್ಮ ಕಾರ್ಯವ್ಯಾಪ್ತಿಯ ಎಲ್ಲಾ ಹೆಚ್.ಟಿ. ಗ್ರಾಹಕರಿಗೆ ವಿದ್ಯುತ್ ಬಿಲ್ಲನ್ನು ಪ್ರತಿ ತಿಂಗಳು ದಿನಾಂಕ ೫ರ ಒಳಗಾಗಿ ತಪ್ಪದೆ ಸಲ್ಲಿಸಲಾಗುವುದೆಂದು ತಿಳಿಸಿದರು. ಕಾರ್ಯನಿರ್ವಾಹಕ ಇಂಜನೀಯರರು(ವಿ) ಮಾತನಾಡುತ್ತಾ ಎಲ್ಲಾ ಹೆಚ್.ಟಿ. ವಿದ್ಯುತ್ ಸ್ಥಾವರಗಳ ಈ-ಮೇಲ್ ಐ.ಡಿ ಯನ್ನು ಪಡೆದು ವಿದ್ಯುತ್ ಬಿಲ್ಲಿನ ಪ್ರತಿಯನ್ನು ಈ ಮೇಲ್ ಮುಖಾಂತರ ಕಳುಹಿಸಲು ಸೂಚನೆ ನೀಡಿದರು.

(ಕ್ರಮ: ಸ.ಕಾ.ನಿ.ಇಂ(ವಿ) ಬೀದರ ಉಪ ವಿಭಾಗ )

೩. ಮೆ. ಶಿವಾ ಗ್ಲಾಸ್ ಫ್ಯಾಕ್ಟರಿ, ಆರ್.ಆರ್.ಸಂಖ್ಯೆ ಬೀದರ ಎಲ್.ಟಿ-೯೦೫೧೧೨: ಸದರಿ ಸ್ಥಾವರದ ಪ್ರತಿನಿಧಿ ಹಾಜರಿದ್ದು, ಈ ಸ್ಥಾವರದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದ್ದು, ಮುಂಗಡ ಠೇವಣಿ ಮೊತ್ತವನ್ನು ಹಿಂತಿರುಗಿಸಲು ಕೋರಿದರು.

- ಬೀದರ ಉಪವಿಭಾಗದ ಸ.ಕಾರ್ಯನಿರ್ವಾಹಕ ಇಂಜನೀಯರರು(ವಿ) ಮಾತನಾಡುತ್ತಾ ಸದರಿ ಸ್ಥಾವರದ ಮುಂಗಡ ಠೇವಣಿ ಮೊತ್ತದ ವಿವರಗಳನ್ನು ಪಡೆದು ಕಂಪನಿ ನಿಯಮಾನುಸಾರ ಗ್ರಾಹಕರಿಗೆ ಹಿಂತಿರುಗಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

(ಕ್ರಮ: ಸ.ಕಾ.ನಿ.ಇಂ(ವಿ) ಬೀದರ ಉಪ ವಿಭಾಗ)

೪. ಮುರಾರ್ಜಿ ದೇಸಾಯಿ ಶಾಲೆ ಬೊಂಬಳಗಿ ಆರ್ ಆರ್ ಸಂ-ಬಿಬಿಹೆಚ್‌ಟಿ-೧: ಶಾಲೆಯ ಪ್ರಾಂಶುಪಾಲರು ಹಾಜರಿದ್ದು ಸದರಿ ಶಾಲೆಯಲ್ಲಿ ಸೌರ ಘಟಕ ಅಳವಡಿಸಿ, ಸೌರಶಕ್ತಿಯಿಂದ ವಿದ್ಯುತ್ ಬಳಸಲಾಗುತ್ತಿದ್ದರು ಸಹ ವಿದ್ಯುತ್ ಬಿಲ್ಲಿನ ಮೊತ್ತವು ಹೆಚ್ಚಾಗಿ ಬರುತ್ತಿರುವುದೆಂದು ತಿಳಿಸಿದರು.

- ಕಮಠಾಣ ಉಪವಿಭಾಗದ ಸ.ಕಾರ್ಯನಿರ್ವಾಹಕ ಇಂಜನೀಯರರು(ವಿ) ಮಾತನಾಡುತ್ತಾ ಸದರಿ ಶಾಲೆಗೆ ಹೆಚ್‌ಟಿ ಪ್ರವರ್ಗ ಜಕಾತಿಯಡಿ ಕಂಪನಿ ನಿಯಮಾನುಸಾರವೆ ಬಿಲ್ಲು ತಯಾರಿಸಿ ಕೊಡಲಾಗುತ್ತಿದೆಯೆಂದು ತಿಳಿಸಿದರು. ಸದರಿ ಸ್ಥಾವರದ ಅಕ್ಟೋಬರ-೨೦೧೯ ತಿಂಗಳಿನ ವಿದ್ಯುತ್ ಬಿಲ್ಲನ್ನು ಪರಿಶೀಲಿಸಲಾಗಿ, ಪವರ್‌ಫ್ಯಾಕ್ಟರ್ ೦.೩೯ ಆಗಿದ್ದು, ಪವರ್‌ಫ್ಯಾಕ್ಟರ್ ದಂಡದ ಮೊತ್ತವು ಸುಮಾರು ರೂ. ೭೫೬೮.೦೦ನ್ನು ವಿಧಿಸಿರುವುದನ್ನು ಕಂಡು, ಸದರಿ ಸ್ಥಾವರದಲ್ಲಿ ಸೂಕ್ತ ಪ್ರಮಾಣದ ಕಂಡೆನ್ಸರ್ ಅಳವಡಿಸಲು ಶಾಲೆಯ ಪ್ರಾಂಶುಪಾಲರಿಗೆ ತಿಳಿಸಲಾಯಿತು.

(ಕ್ರಮ: ಪ್ರಾಂಶುಪಾಲರು ಮುರಾರ್ಜಿ ದೇಸಾಯಿ ಶಾಲೆ ಬೊಂಬಳಗಿ)

೫. ಮೆ. ಸೂರ್ಯಕಲಾ ಲ್ಯಾಬ್ಸ್, ಕೋಳಾರ ಆರ್ ಆರ್ ಸಂ-ಕೆಹೆಚ್‌ಟಿ-೫೮: ಸದರಿ ಕಾರ್ಖಾನೆಯ ಪ್ರತಿನಿಧಿಯು ಹಾಜರಿದ್ದು, ಸದರಿ ಸ್ಥಾವರದ ಪಕ್ಕದಲ್ಲಿರುವ ಇನ್ನೊಂದು ಕಾರ್ಖಾನೆ ಮೆ. ಕಾರವಿನ್ ಕೆಮಿಕಲ್ಸ್ ರವರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಮಾರ್ಗದಲ್ಲಿ ದೋಷವಿದ್ದು ಇದರಿಂದಾಗಿ ತಮ್ಮ ಕಾರ್ಖಾನೆಯ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಆಗುತ್ತಿರುವುದಾಗಿ ತಿಳಿಸಿದರು ಅಲ್ಲದೆ ರಾತ್ರಿ ಸಮಯದಲ್ಲಿ ನಿಗಧಿತ ೧೧ಕೆವಿ ವೋಲ್ಟೇಜ್‌ಗಿಂತ ಹೆಚ್ಚುವರಿ ವಿದ್ಯುತ್ ಪ್ರವಹಿಸುತ್ತೀರುವುದಾಗಿ ತಿಳಿಸಿದರು

- ಕಮಠಾಣ ಉಪವಿಭಾಗದ ಸ.ಕಾರ್ಯನಿರ್ವಾಹಕ ಇಂಜನೀಯರರು(ವಿ) ಮಾತನಾಡುತ್ತಾ ಮೆ. ಕಾರವಿನ್ ಕೆಮಿಕಲ್ಸ್ ಕಾರ್ಖಾನೆಯ ಆಂತರಿಕ ವೈರಿಂಗ್ ಸಮಸ್ಯೆಯಿಂದ ೧೧ಕೆವಿ ಫೀಡರಿನಲ್ಲಿ ವಿದ್ಯುತ್ ವ್ಯತ್ಯಯ ಆಗುತ್ತಿರುವುದಾಗಿ ಹೇಳಿದರು ಮತ್ತು ೧೧೦/೧೧ಕೆವಿ ಕೋಳಾರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತಾಂತ್ರಿಕ ಸಮಸ್ಯೆ ಇರುವ ಕಾರಣ ರಾತ್ರಿ ಸಮಯದಲ್ಲಿ ಕೋಳಾರ

Scanned with CamScanner

ಕೈಗಾರಿಕಾ ಪ್ರದೇಶದಲ್ಲಿ ನಿಗದಿತ ೧೧ಕೆವಿ ವೋಲ್ಟೇಜಿಗಿಂತ ಹೆಚ್ಚಿನ ವಿದ್ಯುತ್ ವೋಲ್ಟೇಜ್ ಪ್ರವಹಿಸುತ್ತಿರುವುದಾಗಿ ತಿಳಿಸಿದರು.

ಸದರಿ ಎರಡು ಅಂಶಗಳ ಕುರಿತಂತೆ ಪರಿಶೀಲಿಸಿ, ಮೆ. ಶಾರವಿನ್ ಕೆಮಿಕಲ್ಸ್ ಕಾರ್ಖಾನೆಗೆ ತಮ್ಮ ಆಂತರಿಕ ವೈಯರಿಂಗ್ ಪರಿಶೀಲಿಸಿಕೊಳ್ಳುವಂತೆ ನೋಟಿಸ ನೀಡಲು ಸೂಚಿಸಲಾಯಿತು ಮತ್ತು ಕೋಳಾರ ವಿದ್ಯುತ್ ವಿತರಣಾ ಕೇಂದ್ರದ ಸಮಸ್ಯೆ ಕುರಿತಂತೆ ಲಿಖಿತ ರೂಪದಲ್ಲಿ ಕವಿಪ್ರನಿನಿ ಅಧಿಕಾರಿಗಳ ಗಮನಕ್ಕೆ ತರಲು ಕಮಠಾಣಾ ಸ.ಕಾ.ನಿ. ಇಂಜನೀಯರರಿಗೆ ಸೂಚನೆ ನೀಡಲಾಯಿತು.
(ಕ್ರಮ: ಸ.ಕಾ.ನಿ.ಇಂ(ವಿ) ಕಮಠಾಣಾ ಉಪ ವಿಭಾಗ ಇವರು ೧೫ ದಿವಸಗಳಲ್ಲಿ ಅನುಸರಣೆ ಸಲ್ಲಿಸುವುದು)

೭. <u>ಮೆ. ಬಿಮಿನಿ ಗ್ರಾಫಿಕ್ಸ್ ಸಿಂಗ್ರಾಪುರ ಆರ್ ಆರ್ ನಂ-ಎಸ್.ವಿ.ಐಪಿಹೆಚ್‌ಟಿ-೧:</u> ಸದರಿ ಕಾರ್ಖಾನೆಯ ಪ್ರತಿನಿಧಿಯು ಮಾತನಾಡುತ್ತಾ ಕಾರ್ಖಾನೆಗೆ ಹಾಲಿ ಇರುವ ಕಮಠಾಣಾ ೧೧೦ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಪ್ರತ್ಯೇಕವಾಗಿ ೧೧ಕೆವಿ ವಿದ್ಯುತ್ ಮಾರ್ಗವು ಬರುತ್ತಿದ್ದು, ಕೆಲವೊಮ್ಮೆ ಸದರಿ ಲೈನಿನ ಎರಡು ಫೇಜಗಳಲ್ಲಿ ವಿಭಿನ್ನ ಮಟ್ಟದ ವೋಲ್ಟೇಜ ಪ್ರಮಾಣ ನಮೂದಾಗಿರುವುದಾಗಿ ತಿಳಿಸಿದರು.

ಕಮಠಾಣಾ ಉಪ ವಿಭಾಗದ ಸ. ಕಾರ್ಯನಿರ್ವಾಹಕ ಇಂಜನೀಯರರು(ವಿ) ಮಾತನಾಡುತ್ತಾ ಈ ಕುರಿತಂತೆ ಕವಿಪ್ರನಿನಿ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.
(ಕ್ರಮ: ಸ.ಕಾ.ನಿ.ಇಂ(ವಿ) ಕಮಠಾಣಾ ಉಪ ವಿಭಾಗ ಇವರು ೧೫ ದಿವಸಗಳಲ್ಲಿ ಅನುಸರಣೆ ಸಲ್ಲಿಸುವುದು)

೮. <u>ಮೆ. ಗುರುಪಾದಪ್ಪಾ ನಾಗಮಾರಪಳ್ಳಿ ಆಸ್ಪತ್ರೆ ಬೀದರ ಆರ್‌ಆರ್‌ನಂ-ಬಿಹೆಚ್‌ಟಿ-೮೪:</u> ಪ್ರತಿನಿಧಿಯು ಹಾಜರಾಗಿದ್ದು ಆಸ್ಪತ್ರೆಗೆ ನೀಡಲಾಗಿದ್ದ ವಿದ್ಯುತ್ ಬಿಲ್ಲಿನ ಮೊತ್ತದಲ್ಲಿ ದೋಷವಿದ್ದು, ಕೂಡಲೇ ಸರಿಪಡಿಸಿ ಹೆಚ್ಚುವರಿಯಾಗಿ ವಸೂಲಿ ಮಾಡಲಾಗಿದ್ದ ಹಣವನ್ನು ಹಿಂತಿರುಗಿಸಲು ಕೋರಿದರು. ಬೀದರ ಉಪವಿಭಾಗದ ಸ.ಕಾರ್ಯನಿರ್ವಾಹಕ ಇಂಜನೀಯರರು(ವಿ) ಮಾತನಾಡುತ್ತಾ ಸದರಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸಮಯದಲ್ಲಿ ಅಳವಡಿಸಲಾಗಿದ್ದ ವಿದ್ಯುತ್ ಮೀಟರ ದೋಷಪೂರಿತ ಎಂದು ಕಂಡುಬಂದ ತಕ್ಷಣವೇ ಸದರಿ ಮೀಟರನ್ನು ಬದಲಾಯಿಸಿ, ಹೆಚ್ಚುವರಿಯಾಗಿ ಪಡೆದಿದ್ದ ವಿದ್ಯುತ್ ಬಿಲ್ಲಿನ ಮೊತ್ತವನ್ನು ಈಗಾಗಲೇ ಸದರಿ ಸ್ಥಾವರದ ವಿದ್ಯುತ್ ಬಿಲ್ಲಿನಲ್ಲಿ ಹೊಂದಿಸಿ ಹಿಂತಿರುಗಿಸಲಾಗಿದೆ ಎಂದು ತಿಳಿಸಿದರು. ಈ ಎಲ್ಲಾ ಮಾಹಿತಿಯನ್ನು ಹಾಗೂ ಸದರಿ ಸ್ಥಾವರದ ಬಿಲ್ಲಿನ ಮೊತ್ತ, ಪಾವತಿಯಾಗಿರುವ ಮೊತ್ತದ ವಿವರಗಳನ್ನು ಲಿಖಿತ ರೂಪದಲ್ಲಿ ಸದರಿ ಗ್ರಾಹಕರಿಗೆ ತಿಳಿಸಲು ಸ.ಕಾ.ನಿ. ಇಂಜನೀಯರರು(ವಿ) ಬೀದರ ರವರಿಗೆ ಸೂಚಿಸಲಾಯಿತು.
(ಕ್ರಮ: ಸ.ಕಾ.ನಿ.ಇಂ(ವಿ) ಬೀದರ ಉಪ ವಿಭಾಗ ಇವರು ೧೫ ದಿವಸಗಳಲ್ಲಿ ಅನುಸರಣೆ ಸಲ್ಲಿಸುವುದು)

ಕಾರ್ಯನಿರ್ವಾಹಕ ಇಂಜನೀಯರರು(ವಿ) ಮಾತನಾಡುತ್ತಾ ಸಭೆಯಲ್ಲಿ ಚರ್ಚೆಯಾಗಿದ್ದ ಎಲ್ಲಾ ದೂರುಗಳಿಗೆ ಸಂಬಂಧಿಸಿದಂತೆ ಸಂಬಂಧಿತ ಉಪವಿಭಾಗಾಧಿಕಾರಿಗಳು ಕಂಪನಿಯ ನಿಯಮಾನುಸಾರ ಸೂಕ್ತಕ್ರಮ ಕೈಗೊಂಡು ಅನುಸರಣಾ ವರದಿಯನ್ನು ಸಲ್ಲಿಸಲು ಮತ್ತು ವಿದ್ಯುತ್ ಗ್ರಾಹಕರಿಗೆ ಲಿಖಿತ ರೂಪದಲ್ಲಿ ಉತ್ತರಿಸಲು ಸೂಚಿಸಿದರು ಮತ್ತು ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯನಿರ್ವಾಹಕ ಇಂಜನೀಯರರು(ವಿ)
ಕಾರ್ಯ ಮತ್ತು ಪಾಲನೆ ವಿಭಾಗ ಗುವಿಸಕಂನಿ.,
ಬೀದರ

Scanned with CamScanner